

# ಪ್ರಿಯಾ ಪ್ರಿಯಾ ಹಲ್ಪ್ರಿಯಾ

ಬಾಯಿ ತೆಗೆದರೆ, ನಮ್ಮ ರಸ್ತೆಗಳ ಕಾಯಂ ರಿಪೇರಿಯಂತೆ ಒಂದಲ್ಲಾ ಒಂದು ಹಲ್ಲಿನ ರಿಪೇರಿಯಾಗಿರುವುದು ಕಾಣುತ್ತಿರುತ್ತದೆ. ದಂತಕ್ಷಯ, ದಂತಕುಳಿ, ಕಸಿ ಹಲ್ಲುಗಳು, ಹಲ್ಲಿನ ಸೈನ್ಯ ನಿರ್ನಾಮವಾಗಿ ಸ್ಥಾಪಿತವಾದ ಕೃತಕ ಹಲ್ಲಿನ ಸೆಟ್ಟು... ಹೀಗೆ ಬಗೆಬಗೆಯ ದಂತ ದರ್ಶನ ಖಚಿತ.

■ ನಳಿನಿ ಟಿ. ಭೀಮಪ್ಪ

'ಹಾಥೀ ಕೆ ದಾಂತ್ ಖಾನೇ ಕೀ ಔರ್, ದಿಖಾನೇ ಕೀ ಔರ್' ಎನ್ನುವ ಸತ್ಯ ಎಲ್ಲರಿಗೂ ಗೊತ್ತೇ ಇದೆ. ಆನೆಯ ಬಾಯಿಯಿಂದ ಹೊರಗೆ ಚಾಚಿರುವ ಉದ್ದನೆಯ ಕೋರೆಹಲ್ಲುಗಳು, ಶೋಕಿಗೆ ಶೋಕೀನೂ ಆಯ್ತು ಅಥವಾ ನಮ್ಮ ಗಣಪನ ಹಾಗೆ ಮುರಿದು ಹೋದರೂ ಅಥವಾ ವೀರಪ್ಪನ್‌ನಂಥ ದಂತಚೋರರು ಕತ್ತರಿಸಿಕೊಂಡು ಹೋದರೂ ಕಿಂಚಿತ್ತೂ ತೊಂದರೆಯಾಗುವುದಿಲ್ಲ. ಆಹಾರ ಜಗಿಯುವ ಬಾಯೊಳಗಿನ ಹಲ್ಲುಗಳು ಮಾತ್ರ ಸದಾ ಸುರಕ್ಷಿತ. ಅವು ಇದ್ದರೂ, ಉದುರಿದರೂ ಹೊರಗಿನಿಂದ ನೋಡುವವರಿಗೆ ವ್ಯತ್ಯಾಸವೇನೂ ಗೊತ್ತಾಗುವುದಿಲ್ಲ.

ಎರಡು ಸೆಟ್ ಹಲ್ಲುಗಳನ್ನು ಏಕಕಾಲಕ್ಕೆ ಪಡೆದ ಆನೆಗಳನ್ನು ಅದೃಷ್ಟಶಾಲಿಗಳ ಗುಂಪಿಗೆ ಸೇರಿಸಬಹುದು. ಮನುಷ್ಯನ ಹಲ್ಲುಗಳಿಗೂ ಈ ತರಹದ ಆಯ್ಕೆ ಇದ್ದಿದ್ದರೆ ಎಷ್ಟು ಚೆನ್ನಾಗಿರ್ತಿತ್ತು ನೋಡಿ. ತಿನ್ನುವ ಹಲ್ಲುಗಳು ಹೇಗಾದರೂ ಇರಲಿ, ಎಷ್ಟಾದರೂ ಇರಲಿ, ಯಾವ ಅಕರಾಳ ವಿಕರಾಳ ಆಕಾರದಲ್ಲಿಯಾದರೂ ಇರಲಿ ನಿಶ್ಚಿಂತೆಯಿಂದ ಇರಬಹುದಿತ್ತು. ಈಗ ಎಲ್ಲದಕ್ಕೂ ಇರುವ ಒಂದು ಸೆಟ್ ಹಲ್ಲಿನ ಸೈನ್ಯವೇ 'ಆಲ್ ಇನ್ ಒನ್' ಆಗಿ ಗುದ್ದಾಡಬೇಕು.

ಮನುಷ್ಯನಿಗೂ ಜೀವಮಾನದಲ್ಲಿ ಎರಡು ಸೆಟ್ ಹಲ್ಲುಗಳು ಬರುತ್ತವೆ ಎನ್ನುವುದೇನೋ ನಿಜ. ಆದರೆ ಜೊತೆಯಲ್ಲಲ್ಲವಲ್ಲ. ಹುಟ್ಟಿದ ನಂತರ ಬರುವ ಅಲ್ಪಾಯಸ್ಸಿನ ಹಾಲುಹಲ್ಲುಗಳು, ಎಷ್ಟೇ ಕಾಳಜಿ ತೆಗೆದುಕೊಂಡರೂ, ಹಿಂದೆ ಬರುವ ಶಾಶ್ವತ ಹಲ್ಲುಗಳು, ಜ್ಯೂನಿಯರ್‌ಗಳ ಮೇಲೆ ರ್‍ಯಾಗಿಂಗ್ ಮಾಡುವ ಸೀನಿಯರ್ ವಿದ್ಯಾರ್ಥಿಗಳಂತೆ, ಹಾಲುಹಲ್ಲುಗಳನ್ನು ಹಿಂದಿನಿಂದ ಜಾಡಿಸಿ ಒದೆಯುತ್ತಾ, ಪ್ರತಿಯೊಂದಕ್ಕೂ ಪೆವಿಲಿಯನ್ ತೋರಿಸಿಬಿಡುತ್ತವೆ. ಬಾಯಿ ತೆಗೆದು ನಕ್ಕರೆ ಥೇಟ್ ಅಣೆಕಟ್ಟಿನ ಕ್ರಸ್ಟ್‌ಗೇಟು ಅಥವಾ ಓಪೆನ್ ವಿಂಡೊಗಳ ಅಪರಾವತಾರವೇ. ಇದು ಬಿಡಿ. ಹಾಲುಹಲ್ಲುಗಳೆಂದ ಮೇಲೆ ಉದುರಿ ಮತ್ತೆ ಶಾಶ್ವತ ಹಲ್ಲುಗಳು ಬರಲೇಬೇಕಾದುದು ನಿಯಮ. ಆದರೆ ಆಗ ಬರುವ ಹಲ್ಲುಗಳು ನೀಟಾಗಿ ಬರುವ ಚಾನ್ಸು ತುಂಬ ಕಡಿಮೆ. ಅದಕ್ಕೆ ಹತ್ತಾರು ಕಾರಣಗಳಿವೆ. ವಕ್ರವಕ್ರವಾಗಿ ಬರುವ ಈ ವಕ್ರದಂತಗಳ ವಿನ್ಯಾಸಗಳೇ ವಿಚಿತ್ರ.

ದಸರಾ ಗೊಂಬೆ ಇಡುವಾಗ ಮಧ್ಯದಲ್ಲಿರುವ ಪಟ್ಟದ ಗೊಂಬೆಗಳಂತೆ, ಬಾಯಿ ತೆಗೆಯುತ್ತಿದ್ದಂತೆ ಕಾಣುವ ಎರಡು ದೊಡ್ಡ ಬಾಚಿಹಲ್ಲುಗಳು, ಒಂದರ ಮೇಲೊಂದು ಹತ್ತಿಕೊಂಡು ಕೂಸುಮರಿಯಂತೆ ಬಂದಿರುತ್ತವೆ. ಇಲ್ಲವಾದರೆ ಡೈವೋರ್ಸ್ ಆದ ಜೋಡಿಯಂತೆ ನಡುವೆ ಸಂದಿ ಬಿಟ್ಟುಕೊಂಡು ನಿಂತಿರುತ್ತವೆ, ಒಮ್ಮೊಮ್ಮೆ ಅಕ್ಕಪಕ್ಕದ ಎರಡು ಹಲ್ಲುಗಳನ್ನು ಕಟ್ಟಿಕೊಂಡು ಬಾಯಿಯ ಹೊರಬಂದು ದೊಡ್ಡ ಹಲ್ಲಿನ ಬಾಚಣಿಗೆಯ ಹಾಗೆ ಹೊರಗೆ ಬಾಚಿನಿಂತಿರುತ್ತವೆ ಅಥವಾ ಯಾರೋ ಒಳಗೆಳೆದುಕೊಂಡಂತೆ ಒಳಹೋಗಿರುತ್ತವೆ. ಕೋರೆ ಹಲ್ಲುಗಳೂ ನಾವೇನು ಕಡಿಮೆ ಎನ್ನುವಂತೆ, ಬಾಯಿಯ ಎರಡೂ ಬದಿಗಳಲ್ಲಿ ಪಿಳಿಪಿಳಿ ಇಣುಕಿ ನೋಡುತ್ತಿರುತ್ತವೆ.